ಆ) ಹುಲಸೂರು ಮತಕ್ಷೇತ್ರದಲ್ಲಿ ಮಂಜೂರಾಗಿ ಕೊರೆಯದ ಬಾಕಿ ಇರುವ ಕೊಳವೆಬಾವಿಗಳೆಷ್ಟು ಕೊರೆಯದೆ ಇರಲು ಕಾರಣಗಳೇನು? ಯಾವಾಗ ಕೊರೆಯಲಾಗುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ೨೦೦೩-೦೪ ಮತ್ತು ೨೦೦೪-೦೫ ನೇ ಸಾಲಿಗೆ ಪರಿಶಿಷ್ಟ ಜಾತಿಗೆ ೨೭೫ ಮತ್ತು ಪರಿಶಿಷ್ಟ ವರ್ಗಕ್ಕೆ ೮೦ ಒಟ್ಟು ೩೫೫ ಕೊಳವೆ ಬಾವಿಗಳು ಮಂಜೂರಾಗಿರುತ್ತವೆ ವಿಧಾನ ಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

ವಿಧಾನಸಭಾ	2003-2004				2004-05	
	ವೈ.ಯೋ		ಸಾಮಾನ್ಯೀಕರಣ		ವೈ.ಯೋ	
ಕ್ಷೇತ್ರವಾರು	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1. ಬೀದರ್	25	07	02	02	17	05
2. ಹುಮನಾಬಾದ್	25	03	04	02	14	05
3. ಬಸವ ಕಲ್ಯಾಣ	25	07	02	02	19	05
4. ಹುಲಸೂರು	25	07	02	-	19	05
5. ಬಾಲ್ಕಿ	25	07	02	-	14	04
6. ಔರಾದ್	25	07	04	-	26	07
ಒಟ್ಟು	150	43	16	06	109	31

ಆ) ಹುಲಸೂರು ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ೨೦೦೩-೦೪ ಮತ್ತು ೨೦೦೪-೦೫ ಸಾಲಿನಲ್ಲಿ ಒಟ್ಟು ಪರಿಶಿಷ್ಟ ಜಾತಿ ೪೬ ಮತ್ತು ಪರಿಶಿಷ್ಟ ವರ್ಗಕ್ಕೆ ೧೨ ಕೊಳವೆ ಬಾವಿಗಳು ಮಂಜೂರಾಗಿದ್ದು ಎಲ್ಲಾ ಕೊಳವೆ ಬಾವಿಗಳನ್ನು ೩೧-೦೩-೦೫ ರ ಅಂತ್ಯದೊಳಗೆ ಕೊರೆಯಲಾಗಿರುತ್ತದೆ.

೩೯೦೦ (೪೪೦೫) ಶ್ರೀ ರವೀಂದ್ರನಾಥ್ ಎಸ್.ವಿ (ಮಾಯಕೊಂಡ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಬ್ಯಾಕ್ ಲಾಗ್ ನೀತಿಗೆ ವಿರುದ್ಧವಾಗಿ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿ ವರ್ತಿಸುತ್ತಿದ್ದು ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಚಿತ್ರದುರ್ಗ ಡಿಸ್ಟ್ರಿಕ್ಟ್ ಮಜ್ದೂರ್ ಸಂಘ, ದಾವಣಗೆರೆ, ಇವರು ೨೦೦೩ ಮತ್ತು ೨೦೦೫ ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೆ;

ಆ) ಹೌದಾದಲ್ಲಿ, ಮನವಿಯಲ್ಲಿನ ಅಂಶಗಳ ಬಗ್ಗೆ ಇಲಾಖಾ ಅಧಿಕಾರಿಗಳು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆಯೆ;

ಇ) ಸಲ್ಲಿಸಿದ್ದಲ್ಲಿ, ಸರ್ಕಾರ ಬ್ಯಾಕ್‌ಲಾಗ್ ನೀತಿಗೆ ವಿರುದ್ಧವಾಗಿ ಆಡಳಿತ ಮಂಡಳಿಯವರು ವರ್ತಿಸಿರುವುದು ಸಾಬೀತಾಗಿದೆಯೇ;

ಈ) ಆಗಿದ್ದಲ್ಲಿ, ಇವರ ಮೇಲೆ ಸರ್ಕಾರ ಕರ್ನಾಟಕ ಅನುಸೂಚಿತ ಜಾತಿಗಳು, ತೆಗೆದುಕೊಂಡಿರುವ ಕ್ರಮಗಳೇನು;

ಉ) ಅನ್ಯಾಯಕ್ಕೊಳಗಾಗಿರುವ ಪರಿಶಿಷ್ಟ ಜಾತಿಗೆ ಸೇರಿದವರಿಗೆ ಸರ್ಕಾರ ಯಾವಾಗ ನ್ಯಾಯ ನೀಡುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಮನವಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿದ ನಂತರ, ಕಾರ್ಖಾನೆಯಲ್ಲಿ ಬ್ಯಾಕ್‌ಲಾಗ್ ಅಡಿಯಲ್ಲಿ ನೇಮಕಾತಿಗೊಂಡವರಿಗೆ ಪೂರ್ಣವೇತನ ಪಾವಿಸುವಂತೆ ಮತ್ತು ಬಾಕಿ ಉಳಿದ ೩೬ ಹುದ್ದೆಗಳನ್ನು ಕೂಡಲೇ ತುಂಬುವಂತೆ ಸಮಾಜ ಕಲ್ಯಾಣ ಆಯುಕ್ತರು, ದಿನಾಂಕ : ೦೭-೦೮-೨೦೦೪ ಹಾಗೂ ೨೨-೦೯-೨೦೦೪ ರಲ್ಲಿ ಕಾರ್ಖಾನೆಯ ಆಡಳಿತ ಮಂಡಳಿಗೆ ಪತ್ರ ಬರೆದಿರುತ್ತಾರೆ.

ಇ) ಹೌದು.

ಈ) ಅನುಸೂಚಿತ ಬುಡಕಟ್ಟುಗಳು ಮತ್ತು ಇತರೇ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ) ಮೀಸಲಾಗಿ ತಿದ್ದುಪಡಿ ನಿಯಮಗಳು ೨೦೦೦ರಡಿಯಲ್ಲಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ. ಇವರು ಕಾರ್ಖಾನೆಯ ಆಡಳಿತ ಮಂಡಳಿಗೆ ನೋಟೀಸ್ ಜಾರಿ ಮಾಡಿರುತ್ತಾರೆ. ಇವರ ಮೇಲೆ ಕಾನೂನು ಕ್ರಮ ಜರುಗಿಸಲು. ಅನುಮತಿ ಕೋರಿ ಕಳುಹಿಸಿದ ಪ್ರಸ್ತಾವನೆಯನ್ವಯ ಕಾರ್ಖಾನೆಯ ಆಡಳಿತ ಮಂಡಳಿಗೆ ಮತ್ತೊಂದು ಅವಕಾಶ ನೀಡಲಾಗಿದೆ. ಅವರ ಪ್ರತಿಕ್ರಿಯೆಯನ್ನು ಅವಲಂಬಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉ) ಈ ಸಂಬಂಧವಾಗಿ ಸಚಿವ ಸಂಪುಟ ಉಪ ಸಮಿತಿಯ ದಿನಾಂಕ : ೨೭-೦೬-೦೫ ರ ಸಭೆಯಲ್ಲಿ ಚರ್ಚೆಯಾಗಿದ್ದು ಸಕ್ಕರೆ ನಿರ್ದೇಶನಾಲಯದ ಆಯುಕ್ತರಿಗೆ ಈ ತಾರತಮ್ಯ ಸರಿಪಡಿಸಲು ಸೂಚನೆ ನೀಡಲಾಗಿದೆ.